## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

**ಸಿ.ಸಿ. ಸಂಖ್ಯೆ: 974/2020**

ಫಿರ್ಯಾದಿದಾರರುಃ ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ವೃತ್ತ, ಹುಣಸೂರು.

ವಿರುದ್ಧ,

ಆರೋಪಿ/ಗಳು ಃ

ಎ 1. ನವೀನ್ ಕುಮಾರ್ ಸಿ.ಎಸ್.
ತಂದೆ - ಲೇಟ್ ಸಿ.ಎನ್. ಸ್ವಾಮಿ
ಸುಮಾರು 55 ವರ್ಷ ವಯಸ್ಸು,

ಎ 2. ನಂದೀಶ @ ಜಯಕುಮಾರ
ಬಿನ್ ನವೀನ್ ಕುಮಾರ್ ಸಿ.ಎಸ್.
ಸುಮಾರು 26 ವರ್ಷ ವಯಸ್ಸು,

ಎ 3. ಮೋಹನ ಕುಮಾರ
ಬಿನ್ ಚನ್ನಬಸಪ್ಪ
ಸುಮಾರು 22 ವರ್ಷ ವಯಸ್ಸು,

ಎ 4. ಗೌರಮ್ಮ
ತಂದೆ -ನವೀನ್ ಕುಮಾರ್ ಸಿ.ಎಸ್.
ಸುಮಾರು 42 ವರ್ಷ ವಯಸ್ಸು,

ಎಲ್ಲರೂ ಚಿಕ್ಕಾಡನಹಳ್ಳಿ ಗ್ರಾಮದ ವಾಸಿಗಳು,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

## ದೋಷಾರೋಪಣೆ

ಶ್ರೀಮತಿ ಪೂಜಾ ಬೆಳಕೇರಿ, ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

1. ದಿನಾಂಕ 02.03.2020 ರಂದು ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ಬಿಳಿಕೆರೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚಿಕ್ಕಾಡನಹಳ್ಳಿ ಗ್ರಾಮದಲ್ಲಿ ದಿಃ 01.03.2020 ರಂದು ಮಾರಮ್ಮನ ಹಬ್ಬದಲ್ಲಿ ಕುಣಿಯುವ ವಿಚಾರದಲ್ಲಿ ನಡೆದ ಘಟನೆಯಿಂದಾಗಿ 2 ನೇ ಆರೋಪಿಯಾದ ನೀವು ಸಾಕ್ಷಿ 1 ರವರಿಗೆ ಪೋನ್ ಮಾಡಿ ನೆನ್ನೆ ದಿವಸ ನೀನು ಜಗಳಕ್ಕೆ ಬಂದಿದ್ದೆ ಈ ದಿವಸ ಇಲ್ಲಿಗೆ ಬಾ ನಿನಗೆ ಇಲ್ಲೇ ಹೊಡೀತಿನಿ ಎಂದು ಕರೆದಿದ್ದರಿಂದ ಸಾಕ್ಷಿ 1 ರವರು ಮಧ್ಯಾಹ್ನ 2.40 ಗಂಟೆಗೆ ಚಿಕ್ಕಾಡನಹಳ್ಳಿ ಗ್ರಾಮದ ಪಕ್ಕದಲ್ಲಿರುವ ಬೃಂದಾವನ ಬಡಾವಣೆಯ ಮಾಳಕ್ಕೆ ಹೋದಾಗ 2 ನೇ ಆರೋಪಿಯಾದ ನೀವು ಸಾಕ್ಷಿ 1 ರವರಿಗೆ ನೀನು ರವಿಯ ಪರವಾಗಿ ಬರುತ್ತೀಯಾ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಎರಡನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ರಿಂದ 4 ನೇ ಆರೋಪಿಗಳಾದ ನೀವುಗಳು ಅಪರಾದ ಮಾಡುವ ಸಮಾನ ಉದ್ದೇಶವುಳ್ಳವರಾಗಿದ್ದು, 1 ನೇ ಆರೋಪಿಯಾದ ನೀವು ನಿಮ್ಮ ಕೈಯಲ್ಲಿದ್ದ ಮಾರಕಾಸ್ತ್ರವಾದ ಮಚ್ಚಿನಿಂದ ಸಾಕ್ಷಿ 1 ರವರ ತಲೆಯ ಹಿಂಭಾಗಕ್ಕೆ ಹೊಡೆದಿದ್ದು, 3 ನೇ ಆರೋಪಿಯಾದ ನೀವು ಮಾರಕಾಸ್ತ್ರವಾದ ದೊಣ್ಣೆಯಿಂದ ಸಾಕ್ಷಿ 1 ಅವರ ಮೈಕೈಗೆ ಹೊಡೆದಿದ್ದು ನಂತರ ಅದೇ ದಿವಸ ಸಾಕ್ಷಿ 2 ರವರು ಸಾಕ್ಷಿ 1 ರವರನ್ನು ಚಿಕ್ಕಾಡನಹಳ್ಳಿ ಗೇಟಿನಲ್ಲಿ ಮಾತನಾಡಿಸಿಕೊಂಡು ಬರುತ್ತಿರುವಾಗ 1 ನೇ ಆರೋಪಿಯಾದ ನೀವು ಮಾರಕಾಸ್ತ್ರವಾದ ಮಚ್ಚನ್ನು ಉಲ್ಟಾ ಹಿಡಿದುಕೊಂಡು ಸಾಕ್ಷಿ 2 ರವರ ಬೆನ್ನಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟುಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

3. ಮೂರನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ರಿಂದ 4 ನೇ ಆರೋಪಿಗಳಾದ ನೀವುಗಳು ಅಪರಾದ ಮಾಡುವ ಸಮಾನ ಉದ್ದೇಶವುಳ್ಳವರಾಗಿದ್ದು, 2 ನೇ ಆರೋಪಿಯಾದ ನೀವು ಮಾರಕಾಸ್ತ್ರವಾದ ದೊಣ್ಣೆಯಿಂದ ಸಾಕ್ಷಿ 1 ಅವರ ಕಿರುಬೆರಳಿಗೆ ಹೊಡೆದು ತೀವ್ರ ಸ್ವರೂಪದ ಗಾಯವನ್ನುಂಟುಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 326 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

4. ನಾಲ್ಕನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ರಿಂದ 4 ನೇ ಆರೋಪಿಗಳಾದ ನೀವುಗಳು ಅಪರಾದ ಮಾಡುವ ಸಮಾನ ಉದ್ದೇಶವುಳ್ಳವರಾಗಿದ್ದು, ಸಾಕ್ಷಿ 2 ರವರು ಸಾಕ್ಷಿ 1 ರವರನ್ನು ಚಿಕ್ಕಾಡನಹಳ್ಳಿ ಗೇಟಿನಲ್ಲಿ ಮಾತನಾಡಿಸಿಕೊಂಡು ಬರುತ್ತಿರುವಾಗ ಆರೋಪಿಗಳಾದ ನಿಮ್ಮ ಮನೆಯ ಬಳಿ ಸೋಮಣ್ಣರವರ ಮನೆಯ ಮುಂದೆ ಹಾದು ಹೋಗಿರುವ ರಸ್ತೆಯಲ್ಲಿ ತನ್ನ ಬೈಕಿನಲ್ಲಿ ಹೋಗುತ್ತಿರುವಾಗ 1 ಮತ್ತು 4 ನೇ ಆರೋಪಿಗಳಾದ ನೀವುಗಳು ಸಾಕ್ಷಿ 2 ರವರಿಗೆ ಅಕ್ರಮ ತಡೆಯುಂಟುಮಾಡಿ ಅವರನ್ನು ಮುಂದೆ ಹೋಗದಂತೆ ತಡೆದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

5. ಕೊನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ರಿಂದ 4 ನೇ ಆರೋಪಿಗಳಾದ ನೀವುಗಳು ಅಪರಾದ ಮಾಡುವ ಸಮಾನ ಉದ್ದೇಶವುಳ್ಳವರಾಗಿದ್ದು, ಸಾಕ್ಷಿ 2 ರವರು ಸಾಕ್ಷಿ 1 ರವರನ್ನು ಚಿಕ್ಕಾಡನಹಳ್ಳಿ ಗೇಟಿನಲ್ಲಿ ಮಾತನಾಡಿಸಿಕೊಂಡು ಬರುತ್ತಿರುವಾಗ ಆರೋಪಿಗಳಾದ ನಿಮ್ಮ ಮನೆಯ ಬಳಿ ಸೋಮಣ್ಣರವರ ಮನೆಯ ಮುಂದೆ ಹಾದು ಹೋಗಿರುವ ರಸ್ತೆಯಲ್ಲಿ ತನ್ನ ಬೈಕಿನಲ್ಲಿ ಹೋಗುತ್ತಿರುವಾಗ 4 ನೇ ಆರೋಪಿಯಾದ ನೀವು ಕೈಯಿಂದ ಸಾಕ್ಷಿ 2 ರವರ ಕೆನ್ನೆಗೆ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟುಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

**(ಪೂಜಾ ಬೆಳಕೇರಿ)**

ದಿನಾಂಕಃ **04.10.2023**

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.**

**ಸಿ.ಸಿ. ಸಂಖ್ಯೆ: 974/2020**

ಫಿರ್ಯಾದಿದಾರರು: ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ವೃತ್ತ, ಹುಣಸೂರು.

ವಿರುದ್ಧ,

ಆರೋಪಿ/ಗಳು : ಎ 4. ಗೌರಮ್ಮ
ತಂದೆ -ನವೀನ್ ಕುಮಾರ್ ಸಿ.ಎಸ್.

ಭಾರತೀಯ ದಂಡ ಸಂಹಿತೆ ಕಲಂ **240(2)** ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ: ನಿಮಗೆ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉತ್ತರ:

ಪ್ರಶ್ನೆ: ತಪ್ಪೊಪ್ಪಿಕೊಳ್ಳುವಿರೋ, ವಿಚಾರಣೆಯಾಗಬೇಕೆನ್ನುವಿರೋ?

ಉತ್ತರ:

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಯು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಂಡಿದೆಯೆಂದು ಈ ಮೂಲಕ ದೃಢೀಕರಿಸುತ್ತೇನೆ.

(ಪೂಜಾ ಬೆಳಕೇರಿ)
ದಿನಾಂಕ: **04.10.2023** ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದಂ.ನ್ಯಾ.. ದಂಡಾಧಿಕಾರಿಗಳು, ಹುಣಸೂರು.